ಎಂಬ ಹೆಸರಿನಲ್ಲಿ ತಮ್ಮ ಕಥೆಯೊಂದನ್ನು ಹೆಸರಾಂತ ಪತ್ರಿಕೆಯ ಯುಗಾದಿ ಕಥಾಸ್ಪರ್ಧೆಗೆ ಕಳಿಸಿದ್ದರು. ಅವರಿಗೆ ಆ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವೇನೋ ಬಂತು. ಆದರೆ ಇವರ ಹೆಸರನ್ನು ಪತ್ರಿಕೆಯಲ್ಲಿ ಅಕಸ್ಮಾತ್ ಕಣ್ತಪ್ಪಿನಿಂದಾಗಿ 'ಜಿಗಣಿ ಕುಮಾರ್' ಬದಲಿಗೆ 'ಜಿಗಣೆ ಕುಮಾರ್' ಎಂದು ಮುದ್ರಿಸಲ್ಪಟ್ಟಿತ್ತು. ನಾಡಿನ ಪ್ರತಿಷ್ಠಿತ ಕಥಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ನಂತರ ಸಹಜವಾಗಿ ಸಾಹಿತ್ಯವಲಯದಲ್ಲಿ ಇವರ ಹೆಸರು 'ಜಿಗಣೆ ಕುಮಾರ್' ಎಂದು ಚರ್ಚಿತವಾಗಿ 'ಜಿಗಣೆಯಂತೆ ಕಥೆಯ ಮೂಲವನ್ನು ಹಿಡಿದ ಕುಮಾರ್' ಎಂಬ ಶೀರ್ಷಿಕೆಯಲ್ಲಿ ಅಭಿಪ್ರಾಯಗಳು ಬಂದವು. ಹಾಗಾಗಿ ಕುಮಾರ್ ಕೂಡ ಈ ಹೆಸರನ್ನು ಬದಲಾವಣೆ ಮಾಡದೆ ಪ್ರತಿಷ್ಠಿತ ಕಥಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ತಂದುಕೊಟ್ಟ 'ಜಿಗಣೆ ಕುಮಾರ್' ಎಂಬ ಹೆಸರನ್ನೇ ಮುಂದೆ ಉಳಿಸಿಕೊಂಡರು.

ಬರಿಯ ವಿಚಿತ್ರ ಹೆಸರಿನಿಂದ ಮಾತ್ರವಲ್ಲದೆ ಅವರು ಕಥೆಗಳಲ್ಲಿ ಕಟ್ಟಿಕೊಡುವ ನೈಜ ಪಾತ್ರಗಳು, ದೂರ್ತರ ಮುಖವಾಡಗಳನ್ನು ಕಳಚುವ ಅವರ ಭಾಷೆ, ಹೆಣ್ಣಿನ ಮೇಲಿನ ಶೋಷಣೆಗೆ ಕನ್ನಡಿ ಹಿಡಿದು ತೋರಿಸಿ ಸಮಾಜದ ಆತ್ಮಸಾಕ್ಷಿಯನ್ನು ಪ್ರಶ್ನಿಸುವ ಅವರ ಕಥೆಗಳಷ್ಟೇ ಪರಿಣಾಮಕಾರಿಯಾಗಿ ಗಂಡಿನ ಕಷ್ಟಗಳು ಮತ್ತು ಅವರ ಮೇಲಾಗುವ ಶೋಷಣೆಯ ಬಗ್ಗೆಯೂ ಕೂಡ ಬರೆಯುತ್ತಿದ್ದರು. ಹಾಗಾಗಿ ಇವರ ಕಥೆಗಳು ನಾಡಿನ ಪ್ರಮುಖ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿ, ಜಿಗಣೆ ಕುಮಾರ್ ಕಡಿಮೆ ಅವಧಿಯಲ್ಲಿಯೇ ಬಹಳ ಪ್ರಖ್ಯಾತಿ ಗಳಿಸಿದರು. ಹಾಗೆಯೇ ತಾವು ಬರೆದ ಕಥೆಗಳನ್ನೆಲ್ಲಾ ಸೇರಿಸಿ ಕಥಾ ಸಂಕಲನವನ್ನು ತಂದಿದ್ದರು, ಮಾತ್ರವಲ್ಲದೆ ಆ ಕೃತಿಗೆ ನಾಡಿನ ಹಲವಾರು ಪ್ರಶಸ್ತಿಗಳೂ, ವಿಮರ್ಶಕರ ಪ್ರಶಸ್ತಿಗಳೂ ಏಕಕಾಲಕ್ಕೆ ಸಂದು ಜಿಗಣೆ ಕುಮಾರ್ ಕಥೆಗಾರರಾಗಿ ಸಾಹಿತ್ಯ ಲೋಕದಲ್ಲಿ ತಮ್ಮದೇ ಛಾಪನ್ನು ಮೂಡಿಸಿದ್ದರು. ಕಥೆಯು ತಲೆಯಲ್ಲಿ ಯಾವುದೋ ಎಳೆಯಾಗಿ ಹೊಳೆದು, ಅದರ ಸುತ್ತ ಪಾತ್ರಗಳು ತಾನಾಗಿ ಕೂಡಿದ ನಂತರ, ಮನಸ್ಸಿನಲ್ಲಿ ಕಥೆಯನ್ನು ಮೊಸರು ಕಡೆಯುವಂತೆ ಕಡೆದು, ಬೆಣ್ಣೆಯ ರೂಪದಲ್ಲಿ ಕಥೆಯು ಒಂದು ಸ್ಪಷ್ಟ ಆಕಾರ ಪಡೆಯುವವರೆಗೂ ಕುಮಾರ್ ಪೆನ್ನು ಹಿಡಿಯುತ್ತಿರಲಿಲ್ಲ. ಆದರೆ, ಕಥೆಯು ಸ್ಪಷ್ಟವಾಗಿ ಉಡ ಹಿಡಿದಂತೆ ಹಿಡಿದುಬಿಟ್ಟರೆ ಮಾತ್ರ ಅವರ ಲೇಖನಿಯಿಂದ ಸರಾಗವಾಗಿ ಒಳ್ಳೆಯ ಕಥೆಗಳು ಹೊರಹೊಮ್ಮುತ್ತಿದ್ದವು. 'ಕಥೆಯನ್ನು ನಾನು ಬರೆಯುವುದಿಲ್ಲ, ಪಾತ್ರಗಳೇ ತಮ್ಮ ಕಥೆಯನ್ನು ಹೇಳಿಕೊಳ್ಳುತ್ತವೆ. ಆ ಪಾತ್ರಗಳು ಹೇಳಿದ ಕಥೆಯನ್ನು ಬರೆದುಕೊಳ್ಳುವ ನಾನು, ವೇದವ್ಯಾಸರು ಹೇಳಿದಂತೆ ಮಹಾಭಾರತ ಬರೆದ ಗಣಪತಿಯ ಹಾಗೆ' ಎಂದು ವಿನಯದಿಂದ ಹೇಳುತ್ತಿದ್ದರು. ಈಗಾಗಲೇ ಎರಡು ಕಥಾಸಂಕಲನಗಳು ಪ್ರಕಟವಾಗಿ, ಪ್ರಕಟಿಸಿದ ಕೆಲವೇ ದಿನಗಳಲ್ಲಿ ಬಿಸಿದೋಸೆಗಳಂತೆ ಖಾಲಿಯಾಗಿ, ಎರಡನೇ ಮುದ್ರಣ ಕಂಡಿದ್ದವು. ಹಲವಾರು ಪ್ರಶಸ್ತಿ ಪಡೆದ ನಂತರ ಆ ಯಶಸ್ಸಿನ ಅಲೆಯಲ್ಲಿ ತೇಲತೊಡಗಿದ್ದ ಕುಮಾರ್‌ರಿಂದ ನಂತರ ಯಾವುದೇ ಮಹತ್ವದ ಕಥೆ ಬಂದಿರಲಿಲ್ಲ. ಬರೆಯಬೇಕು ಎಂದು ಕುಳಿತಾಗಲೆಲ್ಲಾ ತಲೆ ಬ್ಲಾಂಕ್ ಆಗುತ್ತಿತ್ತು.

'ಹುತ್ತ ಕಟ್ಟದೆ ಚಿತ್ತ ಮತ್ತೆ ಕೆತ್ತೀತೇನು' ಎಂಬ ಅಡಿಗರ ಕವಿತೆಯ ಸಾಲಿನಂತೆ ತಲೆಯಲ್ಲಿ ಕಥೆಯ ಯಾವ ಎಳೆಯೂ ಸಿಗದೆ ಬಲವಂತಕ್ಕೆ ಪೆನ್ನು ಪುಸ್ತಕ ಹಿಡಿದರೆ ಕಥೆ ಹೇಗೆ ಮೂಡಲು ಸಾಧ್ಯ? ದೊರಕಿದ ಯಶಸ್ಸು, ಪ್ರಶಸ್ತಿಗಳ ಅಹಂ ತಲೆಗೇರಿ ತನ್ನಲ್ಲಿರುವ ಕಥೆಗಾರ ಮರೆಯಾದನೆ? ಏಕಾಂತ ಮತ್ತು ಏಕಾಗ್ರತೆಯ ಕೊರತೆಯಿಂದ ಕಥೆಗಾರನಿಗೆ ದಾರಿ ಕಾಣುತ್ತಿಲ್ಲವೇ? ಎಂದು ಯೋಚಿಸುತ್ತಾ ಎಂದಿನಂತೆ ಕುಮಾರನು ರಾತ್ರಿ ಹತ್ತು ಗಂಟೆ ಸುಮಾರಿಗೆ ಮಡದಿಯು ಅಡುಗೆ ಮನೆಯಲ್ಲಿ ಪ್ಲಾಸ್ಟಿಕ್ ಕವರಿನಲ್ಲಿ ಗಂಟು ಇಟ್ಟಿದ್ದ ಎರಡು ಕಸದ ಕವರುಗಳನ್ನು ಎತ್ತಿಕೊಂಡು ಬೀದಿಯ ಕೊನೆಯಲ್ಲಿ ಮಸ್ಕತ್ ಮುನ್ಸಿಪಾಲಿಟಿಯವರು ಇಟ್ಟಿರುವ ಕಸದ ತೊಟ್ಟಿಗೆ ಎಸೆಯಲು ಹೋಗಿದ್ದಾಗ, ಕತ್ತಲಿನಲ್ಲಿ ಆ ಬೃಹತ್ ಕಸದ ತೊಟ್ಟಿಯೊಳಗಿನಿಂದ ಏನೋ ಮಿಸುಕಾಟ ಕಾಣಿಸಿತು. ಬೆಕ್ಕೋ, ನಾಯಿಯೋ ಇರಬೇಕು ಎಂದುಕೊಂಡು ಕಸದ ಕವರನ್ನು ಅದರೊಳಗೆ ಎಸೆಯುವುದಕ್ಕೂ ಅದರೊಳಗಿನಿಂದ ಒಬ್ಬ ನರಪೇತಲನಂತಿದ್ದ ಕಪ್ಪನೆಯ, ಕುಳ್ಳನೆಯ ವ್ಯಕ್ತಿ ಏಳುವುದಕ್ಕೂ ಸಮನಾಯಿತು. ಗಾಬರಿಯಾದ ಕುಮಾರನು ಒಂದು ಕ್ಷಣ ಹೆದರಿಕೊಂಡರೂ ಹಲ್ಲು ಕಿರಿಯುತ್ತಾ ನಿಂತಿದ್ದ ಆ ವ್ಯಕ್ತಿಯನ್ನು ನೋಡಿದಾಕ್ಷಣ ಯಾರೋ ಚಿಂದಿ ಆಯುವ ಬಂಗಾಳಿಯೋ,